162(389) ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹೊಸನಗರ ತಾಲ್ಲೂಕು ಪಶು ಆಸ್ಪತ್ರೆಯಲ್ಲಿರುವ ವಾಹನವು ರಿಪೇರಿ ಮಾಡಲಾಗದ ಸ್ಥಿತಿಯಲ್ಲಿರುವುದು ಹಾಗೂ ಆಸ್ಪತ್ರೆಯಲ್ಲಿ ವಾಹನವಿಲ್ಲದಿರು ವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದಲ್ಲಿ ಹೊಸನಗರ ಪಶು ಆಸ್ಪತ್ರೆಗೆ ವಾಹನವನ್ನು ಒದಗಿಸಲು ಕೈಗೊಳ್ಳಲಾದ ಕ್ರಮವೇನು?

ಶ್ರೀ ರೇವೂ ನಾಯಕ್ ಬೆಳಮಗಿ

ಅ) ಹೊಸನಗರ ಪಶು ಆಸ್ಪತ್ರೆಯಲ್ಲಿರುವ ಸಂಚಾರಿ ಪಶು ಚಿಕಿತ್ಸಾಲಯದ ವಾಹನವು ದುರಸ್ತಿಯಾಗಿದ್ದು ಸುಸ್ಥಿಯಲ್ಲಿರುತ್ತದೆ

ಆ) ವಾಹನವು ದುರಸ್ಥಿಯಾಗಿ ಸುಸ್ಥಿತಿಯಲ್ಲಿರುವುದರಿಂದ ಹೊಸ ವಾಹನ ಒದಗಿಸುವ ಅವಶ್ಯಕತೆ ಇರುವುದಿಲ್ಲ

163(390) ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?